ಆ) ಆಸ್ಪಿನ್‌ವಾಲ್ ಬಡಾವಣೆಯಲ್ಲಿನ ಬಿ.ಡಿ.ಎ. ವಾಣಿಜ್ಯ ಸಂಕೀರ್ಣ ಎದುರು ಇರುವ ಬೇರೊಂದೂ ಸಿ.ಎ. ನಿವೇಶನವನ್ನು ಬೆಂಗಳೂರು ನಗರ ಸಾರಿಗೆ: ರಾಜ್ಯರಸ್ತೆ ಸಾರಿಗೆ ಬಸ್ ನಿಲ್ದಾಣಕ್ಕಾಗಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾಗಿರುತ್ತದೆ. ಭೋವಿ ವೆಲ್‌ಫೇರ್ ಅಸೋಸಿಯೇಷನ್ -ರವರು ಗುತ್ತಿಗೆ ಮೌಲ್ಯವನ್ನು ಪಾವತಿ ಮಾಡಿದ್ದು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವಾಧೀನ ಪತ್ರ ನೀಡಿರುವುದರಿಂದ ಸದರಿ ಸಂಘಕ್ಕೆ ಬದಲಿ ನಿವೇಶನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಳ್ಳಂಬೆಳ್ಳ ಕ್ಷೇತ್ರದ ಮುದಿಮಡು ತಿಮ್ಮಯ್ಯನ ಕೆರೆಯ ದುರಸ್ತಿ

2389 - ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರದ ಮುದಿಮಡು ತಿಮ್ಮಯ್ಯನ ಕೆರೆಯ ದುರಸ್ತಿಯನ್ನು ಯಾವ ವರ್ಷದಲ್ಲಿ ಕೈಗೆತ್ತಿಕೊಳ್ಳಲಾಗಿದೆ?

ಆ) ಈ ದುರಸ್ತಿ ಕೆಲಸವನ್ನು ಯಾವ ಯೋಜನೆಯಡಿಯಲ್ಲಿ ಮಾಡಲಾಗುವುದು?

ಇ) ಸದರಿ ದುರಸ್ತಿ ಕೆಲಸಕ್ಕೆ ಮಂಜೂರು ಮಾಡಿರುವ ಹಣವೆಷ್ಟು?

ಈ) ಹಾಲಿ ಸದರಿ ಕೆರೆಯ ಕಾಮಗಾರಿಯು ಯಾವ ಹಂತದಲ್ಲಿದೆ?

ಉ) ಈ ಕೆಲಸಕ್ಕೆ ಈಗಾಗಲೇ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಊ) ಇಲ್ಲಿಯವರೆಗೆ, ಸದರಿ ಕಾಮಗಾರಿಯನ್ನು ಪೂರೈಸದಿರಲು ಇರುವ ತೊಂದರೆಗಳೇನು?

ಋ) ಸದರಿ, ಕಾಮಗಾರಿಯನ್ನು ತುರ್ತಾಗಿ ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) 1985-86

ಆ) ಮುದಿಮಡು ತಿಮ್ಮಯ್ಯನಕಟ್ಟೆ ಸ್ಥಳದಲ್ಲಿ ಹೊಸಕೆರೆ ನಿರ್ಮಾಣಕ್ಕೆ ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ (ಡಿ.ಪಿ.ಎ.ಪಿ) ಯೋಜನೆ ಯಡಿಯಲ್ಲಿ ಪ್ರಾರಂಭ ಮಾಡಲಾಗಿತ್ತು. ಈಗ 4702 ಸಣ್ಣ ನೀರಾವರಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮಾಡಲಾಗುವುದು.

ಇ) ಡಿ.ಪಿ.ಎ.ಪಿ. ಯೋಜನೆಯಡಿ 4.74 ಲಕ್ಷ ರೂ. ಗಳಿಗೆ 1985-86ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ.

ಈ) ಕೆರೆಯ ಏರಿಯಾ ನಿರ್ಮಾಣ ಹಾಗೂ ರಿವೇಟ್‌ಮೆಂಟ್ ನಿರ್ಮಾಣ ಕೆಲಸಗಳನ್ನು ಪೂರ್ಣಗೊಳಿಸಬೇಕಾಗಿದೆ. ಕೋಡಿಗೋಡೆ ನಿರ್ಮಾಣ ಮತ್ತು ರಕ್ಷಣಾ ಕಾಮಗಾರಿಗಳು ಪ್ರಗತಿಯಲ್ಲಿವೆ. ತೂಬು ನಿರ್ಮಾಣ ಪೂರ್ಣಗೊಂಡಿದೆ. ತೂಬುಗಾಲುವೆ ನಿರ್ಮಾಣ ಕಾರ್ಯಕೈಗೆತ್ತಿಕೊಂಡಿಲ್ಲ.

ಊ) ಈ ಕೆಲಸಕ್ಕಾಗಿ 5.62 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಈ ಮೊತ್ತವು ಖರ್ಚಾಗಿರುತ್ತದೆ.

ಋ) ಈ ಕೆರೆ ನಿರ್ಮಾಣ ಕೆಲಸವನ್ನು ಮೊದಲು ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ 1985-86 ರಲ್ಲಿ ಕೈಗೆತ್ತಿಕೊಳ್ಳಲಾಯಿತು. ನಂತರ ಈ ಕೆಲಸವನ್ನು ಈ ಯೋಜನೆಯಡಿಯಲ್ಲಿ ಕೈಬಿಟ್ಟ ಕಾರಣ ಕೆಲಸವು ಸ್ಥಗಿತಗೊಂಡಿತ್ತು. ನಂತರ 1992-93ನೇ ಸಾಲಿನಲ್ಲಿ ಈ ಕೆಲಸವನ್ನು 4702 ಸಣ್ಣ ನೀರಾವರಿ ಯೋಜನೆ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಋ) 1997-98ನೇ ಸಾಲಿಗೆ ಈ ಕೆಲಸಕ್ಕಾಗಿ 0.71 ಲಕ್ಷ ರೂ.ಗಳ ಅನುದಾನವಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ದ. ಕನ್ನಡ ಜಿಲ್ಲೆಯ ಪೋಲೀಸ್ ಠಾಣೆಗಳ ಕುರಿತು

2390- ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು ಮತ್ತು ಇಲ್ಲಿರುವ ವಿವಿಧ ವರ್ಗಗಳ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಕಳೆದ 4 ವರ್ಷಗಳಿಂದಲೂ ಹೆಚ್ಚಾಗಿ ಒಂದೇ ಪೊಲೀಸ್ ಸ್ಟೇಷನ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಇ) ಇವರ ವರ್ಗಾವಣೆಗಳಾಗಿ ಸರಕಾರ ಯಾವ ಮಾನದಂಡ ಅಳವಡಿಸಲಾಗಿದೆ.?

ಈ) ಉಳ್ಳಾಲ ವಿಧಾನ ಸಭಾಕ್ಷೇತ್ರದಲ್ಲಿ ಬರುವ ಪೊಲೀಸ್ ಠಾಣೆಯಲ್ಲಿ ಕಳೆದ 4-5 ವರ್ಷಗಳಿಗಿಂತಲೂ ಹೆಚ್ಚಾಗಿ ಇರುವ ಪೊಲೀಸ್ ಸಿಬ್ಬಂದಿಗಳನ್ನು ವರ್ಗಾವಣೆ ಮಾಡದಿರಲು ಕಾರಣವೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಪೊಲೀಸ್ ಠಾಣೆಗಳ ಸಂಖ್ಯೆ ಒಟ್ಟು 45 (ರೈಲ್ವೆ ಪೊಲೀಸ್ ಠಾಣೆ ಒಂದು ಸೇರಿದಂತೆ) ಇಲ್ಲಿರುವ ವಿವಿಧ ಸಿಬ್ಬಂದಿಗಳ ಸಂಖ್ಯೆಯನ್ನು ಈ ಕೆಳಗೆ ಕಾಣಿಸಿದೆ.

ಪೊಲೀಸ್ ಇನ್ಸ್‌ಪೆಕ್ಟರ್ (ಎಸ್‌ಹೆಚ್‌ಒ)	-	5
ಪೊಲೀಸ್ ಸಬ್-ಇನ್ಸ್‌ಪೆಕ್ಟರ್	-	53
ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್	-	101
ಹೆಡ್ ಕಾನ್ಸ್‌ಟೇಬಲ್	-	342